# ಹೊಲತಿಯರ ಪ್ರಸಂಗ

ರಾಘವಾಂಕ ಶೈವಕವಿ. ಹರಿಶ್ಚಂದ್ರ ಕಾವ್ಯವನ್ನು ಬರೆದು ನರಸ್ತುತಿ ಮಾಡಿದನೆಂಬ ಕಾರಣಕ್ಕೆ ಮಾವನಾಗಿದ್ದ ಹರಿಹರ ಇವನ ಹಲ್ಲು ಮುರಿದ ಕಥೆ ಜನಜನಿತವಾಗಿದೆ. ಕವಿ ಸಮಾಜಮುಖಿಯಾಗಿರಬೇಕೆಂದು ಹೇಳುತ್ತೇವೆ. ಒಬ್ಬ ಪ್ರತಿಭಾಶಾಲಿಯಾದ ಸೃಜನಶೀಲ ಕವಿ ತನ್ನ ಜವಾಬ್ದಾರಿಯನ್ನು ಹೇಗೆ ನಿಭಾಯಿಸುತ್ತಾನೆ ಎಂಬುವುದು ಮುಖ್ಯ. ಸಮಾಜದ ಒಳಿತು ಕೆಡಕುಗಳನ್ನು ವಿಶ್ಲೇಷಿಸುವ, ಪರಾಮರ್ಶಿಸುವ ಸಾಮರ್ಥ್ಯ ಇರುವವನೇ ನಿಜವಾದ ಕವಿ. ಇದಕ್ಕೆ ಎಡಪಂಥ ಬಲಪಂಥ ಎಂದೇನಿರುವುದಿಲ್ಲ. ಮನಸ್ಸಿನ ಸ್ವಾಸ್ಥ್ಯವು ಅತಿಗೆಳೆಯದಂತೆ ಪಾತ್ರವನ್ನು ನಿರ್ವಹಿಸುವುದು ಅತ್ಯಂತ ಕಷ್ಟದ ಕೆಲಸ. ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಅಂಥ ಒಂದು ಸನ್ನಿವೇಶ ಬಹಳ ಆಪ್ಯಾಯಮಾನವಾಗಿದ್ದು ನನ್ನನ್ನು ಬಹಳವಾಗಿ ಕಾಡಿದೆ. ಇಡೀ ಕಾವ್ಯದಲ್ಲಿ ಎದ್ದು ಕಾಣುವ 'ಹೊಲತಿಯರ ಪ್ರಸಂಗ' ಹಲವು ಕಾರಣಗಳಿಂದ ಸಾರ್ವಕಾಲಿಕವಾಗಿದೆ. ಎಲ್ಲರ ಮನಸ್ಸನ್ನು ಗೆಲ್ಲುತ್ತದೆ.

ಹರಿಶ್ಚಂದ್ರನು ಬೇಟೆಯಾಡುತ್ತಾ ಕಾಡುಹಂದಿಯೊಂದನ್ನು ಬೆನ್ನಟ್ಟಿ ಅರಿಯದೆ ವಿಶ್ವಾಮಿತ್ರನ ಆಶ್ರಮಕ್ಕೆ ಬಂದುಬಿಡುತ್ತಾನೆ. ಬೇಟೆಯಾಡಿದ ಆಯಾಸ ಒಂದು ಕಡೆಯಾದರೆ ತನ್ನ ಗುರು ವಸಿಷ್ಠನ ಆಜ್ಞೆಗೆ ವಿರುದ್ಧವಾಗಿ ಅಲ್ಲಿಗೆ ಹೋಗಿದ್ದೇನೆಂಬ ದುಗುಡ ಒಂದು ಕಡೆ; ಈ ಸ್ಥಿತಿಯಲ್ಲಿ ವಿಶ್ವಾಮಿತ್ರ ಸೃಷ್ಟಿಸಿದ ಇಬ್ಬರು ಹೊಲತಿಯರು ಬಂದು ನೃತ್ಯಗಾನಾದಿಗಳಿಂದ ರಾಗರಸಲಹರಿಯಲ್ಲಿ ಅವನ ಆಯಾಸವನ್ನು ಕಳೆಯುತ್ತಾರೆ. ಅದಕ್ಕೆ ಸಂತೋಷಗೊಂಡ ರಾಜನು ತನ್ನಲ್ಲಿದ್ದ ಸರ್ವಾಭರಣವನ್ನು ಅವರಿಗೆ ಉಡುಗೊರೆಯಾಗಿ ಕೊಡುತ್ತಾನೆ. ಆದರೆ ಅವರು ಅಷ್ಟಕ್ಕೆ ತೃಪ್ತಿಪಟ್ಟುಕೊಳ್ಳುವವರಲ್ಲ. ಅವರ ಉದ್ದೇಶವೆ ಬೇರೆ ಇದೆ. 'ಬಡತನದ ಹೊತ್ತಿನಲ್ಲಿ ಆನೆ ದೊರಕಿ ಫಲವೇನು? ಬಾಯಾರಿದ ಹೊತ್ತಿನಲ್ಲಿ ತುಪ್ಪ ದೊರಕಿದರೆ ಫಲವೇನು? ಕಡುವಿಸಿಲು ಹೊಡೆದು ಬೆಂಡಾಗಿ ಬೀಳುತ್ತಿರುವ ನಮಗೆ ನೀನೊಲಿದು ಮಣಿದೊಡಿಗೆಗಳನಿತ್ತು ಫಲವೇನು ಭೂಪಾಲ! ಸುಡುವ ಬಿರುಬಿಸಿಲ ಸೆಕೆಯುಸುರ ಬಿಸಿ ಹೊಡೆದುದು; ನಿನ್ನ ಮುತ್ತಿನ ಸತ್ತಿಗೆಯಿತ್ತು ಸಲಹು' ಎಂದು ಕೇಳುತ್ತಾರೆ! ಇವರೀರ್ವರ ಸಂಭಾಷಣೆಯನ್ನು ಕವಿ ರಸವತ್ತಾಗಿ ಚಿತ್ರಿಸಿದ್ದಾನೆ.

ರವಿಕುಲ ಪೀಳಿಗೆಯ ಆ ಮುತ್ತಿನ ಸತ್ತಿಗೆಯನ್ನು ಹರಿಶ್ಚಂದ್ರ ಕೊಡಲೊಪ್ಪುವುದಿಲ್ಲ. ಆಗವರು ಛತ್ರವಿಲ್ಲದಿದ್ದರೆ ಹೋಗಲಿ ನಮ್ಮನ್ನು ಮದುವೆ ಮಾಡಿಕೊ ಎಂದು ಸಂಕೋಚವನ್ನು ತೊರೆದು, ಬಾಯ್ಬಿಟ್ಟು ಕೈಮುಗಿದು ಕೇಳಿಕೊಳ್ಳುತ್ತಾರೆ. ಮದುವೆಯ ಪ್ರಸ್ತಾಪಕ್ಕೆ ಇದು ಸಕಾರಣವೆ ಎಂದು ಪ್ರಶ್ನಿಸದೆ ಮುಂದೆ ನಾವು ಓದಿಕೊಳ್ಳಬೇಕು. ಇಲ್ಲವೆಂದರೆ ಕಾವ್ಯದ ರಸಾನುಭವಕ್ಕೆ ಧಕ್ಕೆಯಾದೀತು! ಸೂರ್ಯಕುಲದ ರಾಯನಿಗೆ ಹೊಲತಿಯರು ಬಂದು ಸತಿಯರಾಗಬಯಸಿದ್ದು; ಇದೇನು ಕಾಲ ಕೆಟ್ಟುಹೋಯಿತೆ ಅಥವಾ ಇದು ಈ ನೆಲದ ಗುಣವೋ ಎಂದು ರಾಜ ಆಶ್ಚರ್ಯ ವ್ಯಕ್ತಪಡಿಸುತ್ತಾನೆ.

ಇಲ್ಲಿ ಆ ಹೊಲತಿಯರು ಎತ್ತುವ ಕುಲದ ಪ್ರಶ್ನೆ ಅತ್ಯಂತ ಮಾರ್ಮಿಕವೂ, ಪ್ರಬುದ್ಧವೂ ಆಗಿದೆ. ಪವಿತ್ರ ಹಾಲನ್ನು ಕೊಡುವ ಕೆಚ್ಚಲು ಮಾಂಸವಲ್ಲದೆ ಮತ್ತಾವುದು ಲೇಸು? ಮಧುವನ್ನು ಸ್ರವಿಸುವ ನೊಣಕ್ಕಿಂತ ಉತ್ತಮವಾವುದು? ಅಧಿಕ ಕಸ್ತೂರಿ ಕೊಡುವ ಮೃಗನಾಭಿ ಹೇಗೆ ಕಡಿಮೆ?, ದೇವರಿಗೆ ಸಲ್ಲವೆ? ಇಂದೆಮ್ಮ ರೂಪು, ಜವ್ವನವಿರಲು ಕುಲದ ಮಾತೇಕೆ? ಎಂದು ಪ್ರಶ್ನಿಸುತ್ತಾರೆ. ಮನುಷ್ಯನ ಸಾಮಾನ್ಯ ಜ್ಞಾನಕ್ಕೆ ದಕ್ಕುವ ಈ ಪ್ರಶ್ನೆ ಇಂದಿಗೂ ಪ್ರಸ್ತುತವಾಗಿದೆ. ಕುಲನಿಷ್ಠವಾದ ಭಾರತೀಯ ಸಂಪ್ರದಾಯಸ್ಥ ಮನಸ್ಸು ಉತ್ತರವನ್ನು ಕಂಡುಕೊಳ್ಳಲಾಗಿಲ್ಲ. ಆದರೂ ಹರಿಶ್ಚಂದ್ರ ಉತ್ತರಿಸುತ್ತಾನೆ. ಅದು ಢಾಂಬಿಕನೊಬ್ಬನ ಉತ್ತರದಂತಿದೆ. ಇದುರಿನವರು ತನ್ನಂತೆಯೆ ಇರುವ ಮನುಷ್ಯ ಕುಲದವರೆಂದರಿಯದೆ ಅವನು ಮಾಡುವ ಹೋಲಿಕೆ ಜಾತಿ ಕಾರಣವನ್ನು ಒತ್ತಿ ಹೇಳುತ್ತದೆ. 'ಅಕ್ಕಕ್ಕು; ಬಚ್ಚಲ ನೀರು ತಿಳಿಯಾದರೆ ಮೀಯುವುದಕ್ಕೆ ಯೋಗ್ಯವೆ? ನಾಯಿಯ ಹಾಲು ಊಟಕ್ಕೆ ಯೋಗ್ಯವೆ? ನಿಮ್ಮ ಜವ್ವನದ ಸೊಕ್ಕು, ರೂಪಿನ ಸೊಗಸು ಯಾವುದಕ್ಕೆ ಯೋಗ್ಯ ಶಿವಶಿವಾ! ಈ ಮಾತು ತಾ ಹೊಲೆ! ಎನ್ನುತ್ತಾನೆ.

ಅದಕ್ಕೂ ಹೊಲತಿಯರಲ್ಲಿ ಉತ್ತರವಿದೆ. ಅವರು ಕೊಡುವ ಉತ್ತರದಲ್ಲಿ ಕವಿಯ ಪ್ರತಿಭಾಶಕ್ತಿ ಉಜ್ವಲವಾಗಿ ಬೆಳಗಿದೆ. ಪಂಚೇಂದ್ರಿಯಗಳ ಪ್ರತಿಮೆಗಳನ್ನು ಬಳಸಿ ಸತ್ವಪೂರ್ಣ, ಸುಸಂಬದ್ಧ, ಮರುಪ್ರಶ್ನಾತೀತ ಉತ್ತರವನ್ನು ಅವರು ಕೊಡುತ್ತಾರೆ. 'ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ, ಮಾತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ, ಮೆಯ್‌ಮುಡಿಗಳಿಂ ಸುಳಿವ ತಂಗಾಳಿಯಿಂ ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ, ಸೋಂಕಿಂಗೆ ಹೊಲೆಯುಂಟಾಯ್ತೆ! ಪಂಚೇಂದ್ರಿಯಗಳೊಳು ನಾಲ್ಕಧಮ ಒಂದಧಿಕವೆ? ಇಂಡಿಯಾದ ಯಾವುದೇ ಒಬ್ಬ ಅಸ್ಪೃಶ್ಯ ಕೇಳಬಹುದಾದ ಪ್ರಶ್ನೆ ಇದು. ಭಾರತವನ್ನು ಕಾಡುತ್ತಿರುವ ಅತ್ಯಂತ ಕರಾಳವೆನ್ನಿಸುವ ಪೀಡನೆಯಾದ 'ಅಸ್ಪೃಶ್ಯತೆ'ಯ ಪ್ರಶ್ನೆಗೆ ರಾಘವಾಂಕ ಚಂಡಾಲ ಸ್ತ್ರೀಯರ ಮೂಲಕವೇ ಸಮರ್ಪಕವಾದ ಉತ್ತರವನ್ನು ಕೊಡಿಸಿದ್ದಾನೆ. ಪಂಚೇಂದ್ರಿಯಗಳೊಳು ನಾಲ್ಕಧಮ ಒಂದಧಿಕವೆ? ಅಹಾ! ಎಂಥಾ ಅದ್ಭುತ ಚಮತ್ಕಾರ. ಮುಂದಕ್ಕೆ ವಿವರಣೆಯೆ ಬೇಡವೆನಿಸುತ್ತದೆ. ಆ ಒಂದಧಿಕ ಇಂದ್ರಿಯದ ಮಡಿ ಅಥವಾ ಮೈಲಿಗೆ ಅನವರತ ಇಂಡಿಯಾದ ಕಳಂಕವಾಗಿ ಕಾಡುತ್ತಿದೆ. ಅಷ್ಟೆ ಅಲ್ಲ ಮನುಷ್ಯರ ನಡುವೆ ಪ್ರೀತಿ, ವಿಶ್ವಾಸಗಳ ಕೊಂಡಿಯನ್ನು ಕಳಚಿ ದ್ವೇಷಾಸೂಯೆಗಳ ಮುಳ್ಳನ್ನು ಹರಡಿದೆ.

ಕಥೆ ಹಾಗೇ ಮುಂದುವರೆಯುತ್ತದೆ. ಹೊಲತಿಯರು ಹೊಡೆಸಿಕೊಂಡು ದಬ್ಬಿಸಿಕೊಳ್ಳುವವರೆಗೂ ಸ್ವಾರಸ್ಯಕರವಾಗಿ ವಾದ ಮಂಡಿಸುತ್ತಾರೆ. ಸಮಾಜವು ಕಾವ್ಯದಿಂದ ಏನನ್ನೂ ಕಲಿಯುವುದಿಲ್ಲವೆನ್ನುವುದಕ್ಕೆ ಇದೊಂದು ಉದಾಹರಣೆ.

■ ಮೂಚಿ

## ಮಾತೇ ಮುತ್ತು

★ ಕೆಲವೊಮ್ಮೆ ಬದುಕು ನಿಮ್ಮ ತಲೆಗೆ ಇಟ್ಟಿಗೆಯಿಂದ ಬಡಿಯುತ್ತದೆ. ಹಾಗೆಂದು ಬದುಕಿನಲ್ಲಿ ನಂಬಿಕೆ ಕಳೆದುಕೊಳ್ಳಬೇಡಿ.
ಸ್ಟೀವ್ ಜಾಬ್ಸ್

★ ಉತ್ತಮ ಕೇಳುಗನಾಗು. ನಿನ್ನ ಕಿವಿ ಯಾವತ್ತೂ ನಿನ್ನನ್ನು ಕಷ್ಟದಲ್ಲಿ ಸಿಲುಕಿಸುವುದಿಲ್ಲ.
ಫ್ರಾಂಕ್ ಟಿನರ್

★ ಪ್ರತಿಯೊಬ್ಬರೂ ಸುಳ್ಳಾಡುತ್ತಾರೆ. ಆದರೆ ಯಾರೂ ಅದನ್ನು ಕೇಳಿಸಿಕೊಳ್ಳದಿರುವುದರಿಂದ ಅಪಾಯವೇನಿಲ್ಲ.
ನಿಕ್ ಡಯಮಸ್

★ ಅಪರಾಧಗಳನ್ನು ದ್ವೇಷಿಸು; ಅಪರಾಧಿಯನ್ನು ಪ್ರೀತಿಸು.
ಮಹಾತ್ಮ ಗಾಂಧಿ

★ ಹೇಗೆ ಕೇಳಿಸಿಕೊಳ್ಳಬೇಕು ಎನ್ನುವುದನ್ನು ಕಲಿತುಕೊಳ್ಳಿ. ಕೆಟ್ಟದಾಗಿ ಮಾತನಾಡುವವರಿಂದಲೂ ನಿಮಗೆ ಲಾಭವಿದೆ.
ಪ್ಲುಟಾರ್ಕ್

★ ಸಾವಿಗೆ ಅಷ್ಟೊಂದು ಅಂಜಬೇಡಿ. ಅದರ ಬದಲಿಗೆ ಅಪೂರ್ಣ ಬದುಕಿನ ಬಗ್ಗೆ ಭಯ ಪಡಿ.
ಬರ್ಟೋಲ್ಡ್ ಬ್ರೆಕ್ಟ್

★ ಸಾವು ನಮಗೆ ದೊಡ್ಡ ಸಂಗತಿಯೇ ಅಲ್ಲ. ಏಕೆಂದರೆ ನಾವಿದ್ದಾಗ ಅದು ಇರುವುದಿಲ್ಲವಲ್ಲ!
ಎಪಿಕ್ಯೂರಸ್

★ ಇಪ್ಪತ್ತಾಗಲೀ, ಎಂಬತ್ತಾಗಲೀ; ಕಲಿಕೆಯನ್ನು ನಿಲ್ಲಿಸಿದಾತ ಮುದುಕನಾಗುತ್ತಾನೆ.
ಮಾರ್ಕ್ ಟ್ವೈನ್

★ ನಿಮ್ಮ ಮೂಲಗಳನ್ನು ಬಚ್ಚಿಟ್ಟುಕೊಳ್ಳುವುದು ಹೇಗೆಂದು ಗೊತ್ತಿದ್ದರೆ, ಅದುವೇ ಸೃಜನಶೀಲತೆಯ ರಹಸ್ಯ.
ಆಲ್ಬರ್ಟ್ ಐನ್‌ಸ್ಟೀನ್

★ ಸಂತೋಷ ಪಡುವುದರ ಬಗ್ಗೆ ಭಯ ಬೇಡ. ತೀರಾ ಆಸೆಬುರುಕನಂತೆ ಸಂತೋಷ ಪಡುವುದೂ ಬೇಡ.
ಲಾವೊ ತ್ಸು

★ ಪ್ರತಿಯೊಬ್ಬ ಗಂಡಸೂ ಇಬ್ಬರು ಹೆಂಗಸರನ್ನು ಪ್ರೀತಿಸುತ್ತಾನೆ. ಒಬ್ಬಳು ಆತನ ಕಲ್ಪನೆಯಲ್ಲಿ ಹುಟ್ಟುವವಳು. ಇನ್ನೊಬ್ಬಳು ಇನ್ನೂ ಹುಟ್ಟಿಯೇ ಇಲ್ಲ!
ಖಲೀಲ್ ಗಿಬ್ರಾನ್